3) ಬೆಂಗಳೂರು ನಗರ ಸಾರಿಗೆ ಮಾರ್ಗ ಸಂಖ್ಯೆ 143, 145 ಮತ್ತು 146 ರಲ್ಲಿ ಬಸ್ಸುಗಳನ್ನು ಓಡಿಸುವುದು.

SRI M. MUNISWAMY (SHANTHI NAGAR): The following BTS Bus Nos. 143, 145, 146 and some other Buses were plying from City Market, Majestic and Bangalore Bus Station to Austin Town, Neelasandra and Anepalya via Subbaiah Circle, K.H. Road, Long Ford Road, Nanjappa Circle and Rhenins Road.

Since six months the above route buses are not plying without any valid reasons causing a lot of hardship to school going children, ladies and aged people. Inspite of many complaints from the General Public and associations, the concerned officials have become dumb.

Will the Hon'ble Minister for Transport be kind enough to explain the difficulty and the mode of action going to be taken in this regard?

SRI M. MULLIKARJUN KHARGE (Minister for Revenue): On behalf of the Hon.Transport Minister, I make the following statement:

ಟಿಪ್ಪಣಿ

ಬೆಂಗಳೂರು ನಗರ ಸಾರಿಗೆ ವಿಭಾಗವು ಲಾಂಗಫೋರ್ಡ್ ರಸ್ತೆ, ಹೊಸೂರು ರಸ್ತೆ ಮತ್ತು ರಿಚ್‌ಮಂಡ್ ರಸ್ತೆ ಮಾರ್ಗವಾಗಿ ಈ ಕೆಳಕಂಡ ಮಾರ್ಗಗಳಲ್ಲಿ ಬಸ್ ಸೌಕರ್ಯ ಒದಗಿಸಿದೆ.

ಕ್ರ. ಸಂ.	ಮಾರ್ಗಗಳ ಸಂಖ್ಯೆ	ಇಂದ	ಗೆ	ಬಸ್ಸುಗಳ ಸಂಖ್ಯೆ	ಟ್ರಿಪ್ಪುಗಳ ಸಂಖ್ಯೆ
1.	143	ಕೆ.ಆರ್. ಮಾರ್ಕೆಟ್	ನೀಲಸಂದ್ರ	6	136
2.	143E	ಕೆ.ಆರ್. ಮಾರ್ಕೆಟ್	ರೋಸ್‌ಗಾರ್ಡನ್	1	23
3.	145	ಬೆಂಗಳೂರು ಬಸ್‌ನಿಲ್ದಾಣ	ನೀಲಸಂದ್ರ	4	82
4.	133E	ಬ್ಯಾಟರಾಯನಪುರ	ದೂಪನಹಳ್ಳಿ	4	74
5.	146	ಬೆಂಗಳೂರು ಬಸ್ ನಿಲ್ದಾಣ	ವಿವೇಕನಗರ	4	85
6.	146E	ಬೆಂಗಳೂರು ಬಸ್ ನಿಲ್ದಾಣ	ಈಜೀಪುರ	1	18
7.	164	ಮಡಿವಾಳ	ಶಿವಾಜಿನಗರ	4	83
8.	7D	ಬನಶಂಕರಿ	ಜೀವನ್‌ಭೀಮಾನಗರ	4	54

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು ಹೊಸೂರು ರಸ್ತೆಯಲ್ಲಿ ನೀರಿನ ಕೊಳವೆಗಳನ್ನು ಹಾಕುತ್ತಿದೆ. ಇದರ ಪರಿಣಾಮವಾಗಿ ಮೋಲಿನ ಕಮೀಷನರ್‌ರವರು ಒಂದು ಪ್ರಕಟಣೆಯ ಮೂಲಕ ಜಾನ್ಸನ್ ಮಾರ್ಕೆಟ್‌ನಿಂದ ಲಾಂಗ್‌ಫೋರ್ಡ್ ರಸ್ತೆಯನ್ನು ಕೂಡುವವರೆಗೆ (ಎಲ್ಜಿನ್ ಫ್ಲೋರ್‌ಮಿಲ್ ಬಳಿ) ಭಾರಿ ವಾಹನಗಳ ಸಂಚಾರವನ್ನು ನಿಷೇಡಿಸಿದ್ದಾರೆ. ಇದರಿಂದಾಗಿ ಬೆಂಗಳೂರು ನಗರ ಸಾರಿಗೆ

ವಿಭಾಗವು ತನ್ನ ಬಸ್ಸುಗಳ ಸಂಚಾರವನ್ನು ರಿಚ್‌ಮಂಡ್ ರಸ್ತೆಯ ಮೇಲೆ ತಿರುಗಿಸಿದೆ. ಇದರಿಂದಾಗಿ ನಂಜಪ್ಪ ವೃತ್ತದ ಪ್ರದೇಶ ಮತ್ತು ಬಾಲ್ಡ್‌ವಿನ್ ಬಾಲಕರ ಪ್ರೌಢಶಾಲೆ ಪ್ರದೇಶದ ನಿವಾಸಿಗಳಿಗೆ ಅನಾನುಕೂಲ ಉಂಟಾಗಿದೆ. ಆದಾಗ್ಯೂ, ಇದು ತಾತ್ಕಾಲಿಕವಾಗಿದ್ದು ಬೆಂಗಳೂರು ನಗರ ಸಾರಿಗೆ ವಿಭಾಗಕ್ಕೆ ಈಗಿರುವ ಮಣ್ಣಿನ ಗುಡ್ಡೆಗಳನ್ನು ತೆಗೆದು ರಸ್ತೆಯನ್ನು ಸಮಗೊಳಿಸಿದ ಮೇಲೆ ಹೊಸೂರು ರಸ್ತೆಯ ಮೇಲೆ ತನ್ನ ಬಸ್ಸುಗಳ ಸಂಚಾರವನ್ನು ಪುನರಾರಂಭಿಸುವುದು.

ತಾತ್ಕಾಲಿಕ ವ್ಯವಸ್ಥೆಯಾಗಿ ಪ್ರಸಕ್ತ ಅನಾನುಕೂಲತೆಯನ್ನು ನಿವಾರಿಸುವ ಸಲುವಾಗಿ ಬೆಂಗಳೂರು ನಗರ ಸಾರಿಗೆ ವಿಭಾಗವು ನಂಜಪ್ಪ ವೃತ್ತದಿಂದ ಪ್ರಾರಂಭಿಸಿ ನಗರ ಮಾರುಕಟ್ಟೆ ಮತ್ತು ಬೆಂಗಳೂರು ಬಸ್‌ನಿಲ್ದಾಣಗಳಿಗೆ ಸಾರಿಗೆ ಸೌಕರ್ಯವನ್ನು ಒದಗಿಸಲು ಉದ್ದೇಶಿಸಿದೆ.

4) * ರಾಜ್ಯದ -- ಪ್ರೌಢಶಾಲೆ ಮತ್ತು ಪದವಿ ಪೂರ್ವ ಕಾಲೇಜುಗಳಲ್ಲಿರುವ ಅರೆಕಾಲಿಕ ಶಿಕ್ಷಕರನ್ನು ಖಾಯಂಗೊಳಿಸುವುದು.

ಶ್ರೀ ಎ. ರುಕ್ಮಯ್ಯ ಪೂಜಾರಿ (ವಿಧ್ಲ): ಸನ್ಮಾನ್ಯ ಅಧ್ಯಕ್ಷರೆ, ರಾಜ್ಯದ ವಿವಿಧ ಸರಕಾರಿ ಪ್ರೌಢಶಾಲೆ ಮತ್ತು ಪದವಿ ಪೂರ್ವ ಕಾಲೇಜುಗಳಲ್ಲಿ ಕಳೆದ 7-8 ವರ್ಷಗಳಿಂದ ಸುಮಾರು 300ಕ್ಕೂ ಮಿಕ್ಕಿ ಅರಿಕಾಲಿಕ ಶಿಕ್ಷಕರುಗಳು ಸೇವೆ ಸಲ್ಲಿಸುತ್ತಾ ಬಂದಿರುತ್ತಾರೆ. ತಮ್ಮ ಸೇವೆಯನ್ನು ಖಾಯಂ ಗೊಳಿಸುವಂತೆ ಈ ಶಿಕ್ಷಕರುಗಳಿಗೆ ಕೆ. ಎ. ಟಿ.ಯಲ್ಲಿ ಅರ್ಜಿಯನ್ನು ಸಲ್ಲಿಸಿ ಇಲಾಖೆಯಿಂದ ಹೊಸದಾಗಿ ನೇಮಕಗೊಂಡು ಭರ್ತಿಯಾಗುವವರೆಗೆ ಅರೆಕಾಲಿಕ ಶಿಕ್ಷಕರುಗಳನ್ನು ಹುದ್ದೆಯಲ್ಲಿ ಮುಂದುವರಿಸಿ ಹುದ್ದೆಯ ಕನಿಷ್ಟವೇತವನ್ನು ನೀಡುವಂತೆ ಆದೇಶಿಸಿದೆ ಮತ್ತು ಅರೆಕಾಲಿಕ ಶಿಕ್ಷಕರುಗಳು ಸುಪ್ರೀಂಕೋರ್ಟಿನಲ್ಲಿ ಎಸ್.ಎಸ್.ಪಿ.ಯನ್ನು ಸಲ್ಲಿಸಿದ್ದು ಅರಿಕಾಲಿಕ ಶಿಕ್ಷಕರುಗಳ ಯಥಾಸ್ಥಿತಿಯನ್ನು ಮುಂದುವರಿಸುವಂತೆ ಸೂಚಿಸಿದೆ. ಆದರೆ ಕಳೆದ 5-6 ವರ್ಷಗಳಿಂದ ಅರೆಕಾಲಿಕ ವೃತ್ತಿ ಶಿಕ್ಷಕಿಯಾಗಿ ಸೇವೆ ಸಲ್ಲಿಸುತ್ತಿದ್ದ ಶ್ರೀಮತಿ ಜೆಸ್ಸಿಮ್ಮಜಿಲ್ ಸರಕಾರಿ ಪ್ರೌಢಶಾಲೆ ಮಲ್ಪೆ ದ.ಕ. ದೈಹಿಕ ಶಿಕ್ಷಕರಾದ ಶ್ರೀ ಶಿವಪ್ಪಗೌಡ ಸರಕಾರಿ ಪದವಿ ಪೂರ್ವಕಾಲೇಜು ಕನ್ಯಾನ ದ.ಕ. ಮತ್ತು ದೈಹಿಕ ಶಿಕ್ಷಕರಾದ ಶ್ರೀ ಜತ್ತಪ್ಪಗೌಡ ಸರಕಾರಿ ಪದವಿ ಪೂರ್ವಕಾಲೇಜು ಬೆಳ್ಳಾರೆ ದ.ಕ. ಇವರುಗಳನ್ನು ಸೇವೆಯಿಂದ ನಿವೃತ್ತಿಗೊಳಿಸಿದೆ. ರಾಜ್ಯಾದ್ಯಂತ ಸಾಕಷ್ಟು ಶಿಕ್ಷಕರ ಹುದ್ದೆಗಳು ಖಾಲಿ ಇದ್ದರೂ ಶಿಕ್ಷಣ ಇಲಾಖೆಯಲ್ಲಿ ಅರೆಕಾಲಿಕ ಶಿಕ್ಷಕರುಗಳನ್ನು ಸೇವೆಯಿಂದ ನಿವೃತ್ತಿ ಗೊಳಿಸುತ್ತಿರುವುದರಿಂದ ಅವರುಗಳು ನಿರ್ಗತಿಕರಾಗುವಂತೆ ಆಗಿದೆ.

ಆದ್ದರಿಂದ ಅರೆಕಾಲಿಕ ಶಿಕ್ಷಕರುಗಳ ಸೇವೆಯಿಂದ ಖಾಯಂಗೊಳಿಸುವಂತೆ ಈ ಮೂಲಕ ಬಳಲಿದ ಶಿಕ್ಷಕ ಸಮುದಾಯಕ್ಕೆ ಭದ್ರತೆ ಸಿಗುವಂತೆ ತಕ್ಕ ಕ್ರಮ ತೆಗೆದುಕೊಳ್ಳುವಂತೆ ತಮ್ಮ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಶಿಕ್ಷಣ ಸಚಿವರ ಪರವಾಗಿ) : ರಾಜ್ಯದ ವಿವಿಧ ಸರಕಾರಿ ಪ್ರೌಢ ಶಾಲೆಗಳಲ್ಲಿ ಒಟ್ಟು 395 ಅರೆಕಾಲಿಕ ಶಿಕ್ಷಕರು ಮತ್ತು ಪದವಿ ಪೂರ್ವ ಕಾಲೇಜುಗಳಲ್ಲಿ 48 ಅರೆ ಕಾಲಿಕ ಉಪನ್ಯಾಸಕರು ಕರ್ತವ್ಯ ನಿರ್ವಹಿಸುತ್ತಿದ್ದಾರೆ. ತಮ್ಮ ಸೇವೆಯನ್ನು ಖಾಯಂಗೊಳಿಸುವಂತೆ ಶಿಕ್ಷಕರುಗಳು ಕೆ.ಎ.ಟಿ.ಯಲ್ಲಿ ಅರ್ಜಿ ಸಲ್ಲಿಸಿ, ಇಲಾಖೆಯಿಂದ ಹೊಸದಾಗಿ ನೇಮಕವಾಗಿ ಭರ್ತಿಯಾಗುವವರೆಗೆ ಅರೆಕಾಲಿಕ ಶಿಕ್ಷಕರನ್ನು ಸದರಿ ಹುದ್ದೆಯಲ್ಲಿ ಮುಂದುವರೆಸಿ ಹುದ್ದೆಯ ಕನಿಷ್ಟ ವೇತನವನ್ನು ನೀಡುವಂತೆ ಆದೇಶಿಸಿದೆ. ಮತ್ತು ಈ ಬಗ್ಗೆ ಸುಪ್ರಿಂ ಕೋರ್ಟಿನಿಂದಲೂ ಎಸ್‌ಎಲ್‌ಪಿ ಮೂಲಕ ತಾತ್ಕಾಲಿಕ ತಡೆಯಾಜ್ಞೆ ಬಂದಿದ್ದು ಸದರಿ ಅರೆಕಾಲಿಕ ಶಿಕ್ಷಕರುಗಳ ಯಥಾ ಸ್ಥಿತಿಯನ್ನು ಮುಂದುವರೆಸುವಂತೆ ಆದೇಶಿಸಿರುವುದಾದರೂ ಈ